ಕವಯಿತ್ರಿ ಅಕ್ಷತಾ ಹುಂಚದಕಟ್ಟೆ 'ಅಹರ್ನಿಶಿ' ಪ್ರಕಾಶನದ ಮೂಲಕ ಪ್ರಕಾಶಕಿಯಾಗಿಯೂ ಸಾಹಿತ್ಯಲೋಕದಲ್ಲಿ ಜನಪ್ರಿಯರು. 'ರೆಕ್ಕೆ ಬಿಚ್ಚಿ ಆಕಾಶ ನೆಚ್ಚಿ' ಅವರ ಮೊದಲ ಕವನ ಸಂಕಲನ. ಹುಟ್ಟಿದ್ದು ತೀರ್ಥಹಳ್ಳಿ ತಾಲ್ಲೂಕಿನ ಹುಂಚದಕಟ್ಟೆ. ಪ್ರಸ್ತುತ ಶಿವಮೊಗ್ಗ ನಿವಾಸಿ.

ಭ್ರಮರಾಳ ಮೊಂಡುತನ, ರಸಿಕತೆ, ತಮಾಷೆ ಎಲ್ಲವು ತನ್ನದೂ ಆಗಿದ್ದರೆ ಎಷ್ಟು ಚೆಂದ ಎಂದುಕೊಳ್ಳುವ ಸಾವಿತ್ರಿ ತಾನು ಹಾಗಾಗುವುದಕ್ಕೆ ಸಾಧ್ಯವಿಲ್ಲ ಎಂದು ಅರಿಯುತ್ತಾಳೆ. ಒಂದು ಹಂತದಲ್ಲಿ ಬದುಕನ್ನು ತೀರಾ ಗೊಂದಲಗೊಳಿಸಿಕೊಳ್ಳದೇ, ಬದುಕನ್ನು ಹತೋಟಿಗೆ ತೆಗೆದುಕೊಳ್ಳಲು ಯೋಚಿಸಿ ತನ್ನದೇ ದಾರಿಯಲ್ಲಿ ತನ್ನ ವ್ಯಕ್ತಿತ್ವವನ್ನು ಸ್ಥಿಮಿತಕ್ಕೆ ತೆಗೆದುಕೊಳ್ಳುತ್ತಾಳೆ.

ಅಲ್ಲಿಂದಾಚೆ ಅವಳ ಬದುಕು ಬಹಳ ಸರಾಗವಾಗಿ ಸಾಗಿದಂತೆ ಕಾಣುತ್ತದೆ. ನೋಡಲು ಬಂದ ಮೂವರು ಹುಡುಗರನ್ನು ಯಾವ ಕಾರಣ ಹೇಳದೇ ತಿರಸ್ಕರಿಸಿದವಳು ನಾಲ್ಕನೆಯದಾಗಿ ನೋಡಲು ಬಂದ ಹುಡುಗನನ್ನು ಹೆಚ್ಚಿನ ಶೋಧನೆಗಿಳಿಯದೇ ಮದುವೆಯಾಗುತ್ತಾಳೆ. ನಂತರ ಹನಿಮೂನು, ಪ್ರೇಮ ಮತ್ತು ತನ್ನ ಕುಟುಂಬ ಕಟ್ಟುವ ಪ್ರಕ್ರಿಯೆಯಲ್ಲಿ ನಿರತಳಾಗಿ ಬೇರೆಲ್ಲವನ್ನು, ಅಪ್ಪ ಅಮ್ಮನನ್ನು ಸಹಿತವಾಗಿ ಮರೆತೆ ಹೋಗುತ್ತಾಳೆ. ಸಾವಿತ್ರಿಯ ದೃಷ್ಟಿಯಲ್ಲಿ ಅವಳದು ಆದರ್ಶ ಕುಟುಂಬ. ಅದಕ್ಕೆ ಭಂಗ ತರುವ ಯಾವ ಮಾತುಕತೆ, ತನಿಖೆ ಯಾವುದನ್ನು ಆಕೆ ಮಾಡಲಾರಳು. ಗಂಡ ಯಾವ ಕೆಲಸ ಮಾಡುತ್ತಿದ್ದಾನೆಂದು ಅವಳಿಗೆ ಗೊತ್ತಿರುವುದಿಲ್ಲ, ಆದರೂ ಅವಳು ಕೇಳುವುದಿಲ್ಲ. ಗೆಳೆಯರು ಕೇಳಿದಾಗಲೂ ಅವನು ಉತ್ತರಿಸುವ ಮುಂಚೆ ಅವಳೇ ಉತ್ತರಿಸುತ್ತಾಳೆ. ಗಂಡನಿಗೆ ಎಷ್ಟು ಸಂಬಳ ಎಂಬುದು ಅವಳಿಗೆ ಗೊತ್ತಿರುವುದಿಲ್ಲ, ಅವಳು ಅದನ್ನು ಕೇಳುವುದಿಲ್ಲ. ಯಾವುದಕ್ಕೂ ಅವಳ ಗಂಡ ಕಡಿಮೆ ಮಾಡುವುದಿಲ್ಲ... ಓಡಾಟ, ಊಟ, ಪುಸ್ತಕ, ಕ್ಯಾಸೆಟ್ ಯಾವುದಕ್ಕೂ... ಅವಳಿಗೆ ಅಷ್ಟೇ ಸಾಕು. ಅವಳು ಸಂತೃಪ್ತೆ. ಆದರೆ, ಬದುಕಿನ ವಾಸ್ತವ ಬೇರೆಯದೇ ಇತ್ತು. ಅವಳ ಗಂಡ ನಿರುದ್ಯೋಗಿಯಾಗಿದ್ದ. ನೆಪ ಮಾತ್ರಕ್ಕೆ ಅವನ ಗೆಳೆಯನ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ. ಸಂಬಳವೂ ಇರಲಿಲ್ಲ. ಇದ್ದ ಹಣ ಕರಗುತ್ತಿದ್ದಂತೆ ಸಾವಿತ್ರಿಯ ಗಂಡನೂ ಕರಗುತ್ತಾ ಹೋದ. ಇವಳು ಗುಡಿಸಲಲ್ಲಿ ಸಹ ಅವನ ಜೊತೆ ಸಂಸಾರ ಮಾಡಲು ಸಿದ್ಧವಿದ್ದಳು.

ನಿಜಕ್ಕೂ ಅವನನ್ನು ತುಂಬಾ ಪ್ರೀತಿಸಿದ್ದಳು. ಆದರೆ, ಅವನೇ ಒಳಗೊಳಗೆ ನವೆಯುತ್ತಾ ನಡೆದು ಸೋತು ಹೋದ. ಸಾವಿತ್ರಿಯಲ್ಲಿ ಕ್ಷಮೆ ಕೇಳುತ್ತಲೇ ತೀರಿಕೊಂಡ. ಸಾವಿತ್ರಿಗೆ ಎಲ್ಲವೂ ಸ್ಪಷ್ಟವಾಗತೊಡಗಿತ್ತು. ಹಲವು ಅನುಮಾನಗಳು ತಲೆ ಎತ್ತತೊಡಗಿದವು. ತನ್ನ ಗಂಡ ಕೃಷ್ಣ ಮತ್ತು ತಾನು ಇಷ್ಟು ದಿನ ಖರ್ಚು ಮಾಡುತ್ತಿದ್ದ ಹಣದ ಮೂಲ ತಿಳಿಯಲಿಲ್ಲ. ಅಪ್ಪ-ಅಮ್ಮ ಒಮ್ಮೆಯು ಅವರ ಮನೆಗೆ ಬಂದಿರಲಿಲ್ಲ. ಕಾಗದ ಕೂಡಾ ಬರೆದಿರಲಿಲ್ಲ. ಇವಳೂ ಪ್ರೇಮದ ಅಮಲಿನಲ್ಲಿ ಅವರನ್ನು ಮರೆತೆ ಬಿಟ್ಟಿದ್ದಳು. ಗಂಡ ಸತ್ತ ಮರುದಿನವೇ, ಮದುವೆಯಾದ ಮೇಲೆ ಪ್ರಥಮಬಾರಿಗೆ ಅವಳು ತನ್ನ ತವರೂರಿಗೆ ಹೋದರೆ ಅವಳಿಗೆ ರಾಚುವ ಸತ್ಯ- ಅಪ್ಪ ಅಮ್ಮ ಇವಳ ಮದುವೆಯ ವರದಕ್ಷಿಣೆಗಾಗಿ ಮನೆ ತೋಟ ಎಲ್ಲ ಮಾರಿ ಊರು ಬಿಟ್ಟಿದ್ದರು.

ಇನ್ನೊಂದೆಡೆ ಭ್ರಮರಾ ನೆಮ್ಮದಿಯ ಬದುಕು ಬದುಕುತ್ತಿದ್ದಾಳೆಂದು ಸಾವಿತ್ರಿ ತಿಳಿದಿದ್ದರೆ ಅವಳ ಧೈರ್ಯ, ಹಾಸ್ಯ, ಪ್ರೇಮವೆಲ್ಲ ಅವಳ ಗಂಡನ ಯಜಮಾನಿಕೆಯಲ್ಲಿ ಇಂಗಿ ಹೋಗಿದ್ದವು. ಸಾವಿತ್ರಿಯನ್ನು ಅರ್ಥ ಮಾಡಿಕೊಂಡಿದ್ದ ಭ್ರಮರಾ ಅವಳ ತಂದೆತಾಯಿಗೆ ಬರೆದು, ವ್ಯವಸ್ಥೆ ಮಾಡಿದ ಮದುವೆ ಸಾವಿತ್ರಿಯದಾಗಿತ್ತು. ಆದರೆ ಈ ಇಬ್ಬರು ಭಿನ್ನರೀತಿಯ ಹುಡುಗಿಯರ ಕನಸುಗಳೂ, ಬದುಕಿನ ಸೊಗಸೂ ಭಿನ್ನಬಗೆಯಲ್ಲಿ ಕಮರಿದ್ದವು. ಕಮರಿದ್ದು ಸಾವಿತ್ರಿ ಮತ್ತು ಭ್ರಮರಾಳ ಬದುಕಿನ ಕನಸುಗಳು ಮಾತ್ರ ಅಲ್ಲ. ನನ್ನ ಬದುಕಿನ ಕನ್ನಡಿಯನ್ನು ನಾನವರ ಬದುಕಿನ ಎಷ್ಟೋ ಘಳಿಗೆಗಳಲ್ಲಿ ಕಂಡೆ. ಕೆಲವೊಮ್ಮೆ ನಾನೇ ಭ್ರಮರಾ ಹಲವೊಮ್ಮೆ ನಾನೇ ಸಾವಿತ್ರಿ... ಕಮರುತ್ತಾ ಸಾಗುವ ಬದುಕಿನ ತಿರುಳನ್ನು ಚಿಗುರಿಸಲು ಬಿಡದೇ ಸಾಗುವ ಪ್ರಯತ್ನಗಳು... ಇದುವೇ ಬಾಳು... ಇಲ್ಲಿ ಹಲವು ಸಾವಿತ್ರಿಯರು; ಹಲವು ಭ್ರಮರಾಂಬೆಯರು...

●